
ಪುಸ್ತಕದ ಚರ್ಚೆಗಳು ವಾಗ್ವಾದವನ್ನು ಬಯಸುತ್ತವೆ ಎಂಬ ಮಾತನ್ನು ಆರಂಭದಲ್ಲಿಯೇ ಕೆವಿಎನ್ ಅವರು ನಿಚ್ಚಳಪಡಿಸಿದ್ದಾರೆ. ಏಕೆಂದರೆ, ನುಡಿ ಅಳಿವಿನ ಬಗೆಗಿನ ನಂಬಿಕೆ ಮತ್ತು ನಿಲುವುಗಳನ್ನು ಕುರಿತು ವಿಶ್ಲೇಷಿಸುವ ಇಲ್ಲವೇ ವಿಮರ್ಶಿಸುವ ಕೆಲಸವನ್ನು ಮಾತ್ರವೇ ಮಾಡದೆ, ಅಂತಹ ನಂಬಿಕೆಗಳ ಹಿಂದಿನ ತಾತ್ವಿಕ ವಿನ್ಯಾಸಗಳು ಯಾವುವು? ಅವುಗಳಿಂದ ಉಂಟಾಗುವ ಪರಿಣಾಮಗಳು ಎಂತಹವು? ಎಂಬೆಲ್ಲ ಸಂಗತಿಗಳು ಈ ಬರಹದ ಬಹುಮುಖ್ಯ ಚರ್ಚೆಗಳಾಗಿರುತ್ತವೆ.

ಇದು ಕೇವಲ ನುಡಿ ಅಳಿವನ್ನು ಕುರಿತು ಬೆಳೆಸಿದ ಜಿಜ್ಞಾಸೆ ಮಾತ್ರವಲ್ಲ, ಹೊರತಾಗಿ ನುಡಿ ಅಳಿವು ಅನ್ನುವ ವಿದ್ಯಮಾನದ ಸುತ್ತಲು ಹರಡಿಕೊಂಡಿರುವ ಜನಪ್ರಿಯ ಮಾದರಿಗಳನ್ನು ನಿರಚನಗೊಳಿಸುವ ವಿಶ್ಲೇಷಣೆಗಳು ಇಲ್ಲಿ ನಿಚ್ಚಳಗೊಂಡಿವೆ. ಇವುಗಳ ಮುಖ್ಯ ಕಾಳಜಿ ಕೇವಲ ನುಡಿಯಾಗಿರದೇ, ಆ ನುಡಿಯನ್ನು ಮಾತನಾಡುವ ಸಮುದಾಯದ ಬದುಕಿನ ಏಳಿಗೆಯ ಪ್ರಶ್ನೆಗಳು ಮುಖ್ಯವಾಗಿವೆ. ಈಗ ಅಳಿದು ಹೋಗಿರುವ ಇಲ್ಲವೇ ಇನ್ನೊಂದು ನುಡಿಗೆ ಪಲ್ಲಟಗೊಂಡಿರುವ ಸಮುದಾಯಗಳ ಕುರಿತ ಏನೆಲ್ಲ ನಿಲುವುಗಳನ್ನು ತಾಳಲಾಗಿದೆ ಮತ್ತು ಅವುಗಳಿಂದ ಏರ್ಪಟ್ಟಿರುವ ಪರಿಣಾಮಗಳನ್ನು ಹೇಗೆಲ್ಲ ಅರ್ಥೈಸಲಾಗಿದೆ ಎಂಬುದು ಮಹತ್ವವನ್ನು ಪಡೆದಿದೆ. ಅಂದರೆ ಸಮುದಾಯಗಳ ಒಟ್ಟು ಜೀವನ ಪರಿಸ್ಥಿತಿಯನ್ನು ಮುಂಚೂಣಿಗೆ ತರದೇ, ಅದನ್ನು ಹಿನ್ನೆಲೆಯಲ್ಲಿರಿಸಿ, ಆ ಸಮುದಾಯದ ನುಡಿಯನ್ನು ಮಾತ್ರ ಕಾಪಿಡುವ ಬಗೆಯನ್ನು ವಿವರಿಸುವುದು ಎಷ್ಟು ಸರಿ ಎನ್ನುವ ಪ್ರಶ್ನೆಯೇ ಮುಖ್ಯವಾಗಿದೆ. ಒಟ್ಟಾರೆ, ನುಡಿಗಳ ಅಳಿವನ್ನು ತಡೆಯುವುದಕ್ಕೆ ಬೇಕಾದ ಇಲ್ಲವೇ ರೂಪಿಸಿದ ಕಾರ್ಯಯೋಜನೆಗಳ ಹಿಂದಿನ ತಾತ್ವಿಕತೆಯನ್ನು ಮರುಪರಿಶೀಲನೆಗೆ ಗುರಿಪಡಿಸುವ ಉದ್ದೇಶದಿಂದ ಈ ಚರ್ಚೆಗಳನ್ನು ಬೆಳೆಸುವ ಅಗತ್ಯ ಕಂಡುಬಂದಿದೆ. ಅದೇನೆಂದರೆ, ನುಡಿಯನ್ನು ಕಾಪಿಡುವ ಸಮುದಾಯಗಳ ಬದುಕಿನ ಪರಿಸ್ಥಿತಿಯನ್ನು ಮರೆತು, ನುಡಿಯನ್ನಷ್ಟೇ ಕಾಪಿಡುವ ಮಾತು ಯುಕ್ತವಾದುದಲ್ಲ; ಈ ಬರಹದ ಹಿಂದಿನ ಒಂದು ಮುಖ್ಯವಾದ ತಾತ್ವಿಕ ನೆಲೆಯೇ ಅದಾಗಿರುತ್ತದೆ. ನುಡಿಗಳನ್ನಾಡುವ ಸಮುದಾಯಗಳು ತಮ್ಮ ನುಡಿಗಳನ್ನು ಕಳೆದುಕೊಳ್ಳುವ ಒತ್ತಾಯಕ್ಕೆ, ಅನಿವಾರ್ಯ ಪರಿಸ್ಥಿತಿಗೆ ಒಳಗಾಗುತ್ತವೆ ಎನ್ನುವ ಆತಂಕ ದಿಟವಾದುದೇ ಸರಿ. ಇದನ್ನು ನಿವಾರಿಸುವುದು ಹೇಗೆ? ನುಡಿ ಕಾಪಿಡುವ ಯೋಜನೆಗಳು ಈ ಬಿಕ್ಕಟ್ಟನ್ನು ನಿವಾರಿಸಲು ರೂಪಿಸುವ ಯೋಜನೆಗಳ ಹಿಂದಿನ ತಾತ್ವಿಕತೆ ಏನು? ಈ ತಾತ್ವಿಕತೆಯೊಳಗೇ ಕೊರತೆಗಳಿವೆಯೇ? ಈ ಎಲ್ಲ ಪ್ರಶ್ನೆಗಳನ್ನು ಮೈಮೇಲೆ ಎಳೆದುಕೊಂಡು ಚರ್ಚಿಸುವ ಉದ್ದೇಶ ಈ ಬರಹಕ್ಕಿದೆ.




ನುಡಿಗಳ ಅಳಿವು
ಲೇ: ಕೆ.ವಿ. ನಾರಾಯಣ
ಬೆಲೆ: ರೂ. 100
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
ಫೋನ್: 9449174662